ಪಿ.ಡಬ್ಲ್ಯೂಃ 1

ದಿನಾಂಕ 22-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿಗಳ ಪರ ಶ್ರೀ ಆರ್.ವಿ.ಎಸ್ ವಕೀಲರಿಂದಃ**

ನನಗೆ ಕನ್ನಡ ಭಾಷೆಯನ್ನು ಓದಲು ಮತ್ತು ಬರೆಯಲು ಬರುವುದಿಲ್ಲ. ಡ ಸಂಃ 628 ರ ನಮೂದಿನಲ್ಲಿ ದಾವಾ ಶೆಡ್ಯೂಲ್ ಆಸ್ತಿಗಳ ಪೈಕಿ 'ಇ ' ಆಸ್ತಿಯ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಡ ನಮೂದಿನಲ್ಲಿ ಸ ನಂಃ 150/1 ರ ಜಮೀನಿನ ಬಗ್ಗೆ ನಮೂದು ಇಲ್ಲದಿದ್ದರೂ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಜಮೀನು ಮೂಲ ಪುರುಷ ಭರಮಪ್ಪನಿಂದ ಬಂದಿಲ್ಲದೇ ಇರುವ ಕಾರಣಕ್ಕೆ ಸದರಿ ಜಮೀನಿನ ಬಗ್ಗೆ ಸದರಿ ಡ ನಮೂದಿನಲ್ಲಿ ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು 2-3 ಬಾರಿ ಅದೇ ರೀತಿಯ ಸೂಚನೆಗಳನ್ನು ವಕೀಲರು ಕೇಳಿದರೂ ಭರಮಪ್ಪನಿಂದ ಪುಟ್ಟಪ್ಪನಿಗೆ ಬರಬೇಕಿತ್ತು ಎಂದು ನುಡಿಯುತ್ತಾರೆ.

2. ಸ ನಂಃ 150/1 ರಜಮೀನು 1 ಮತ್ತು 2 ನೇ ಪ್ರತಿವಾದಿಗಳ ತಂದೆಯಾದ ಮೃತ ಪಕ್ಕೀರಪ್ಪರವರಿಗೆ ಭೂ ನ್ಯಾಯ ಮಂಡಳಿಯು ರೈತನಾತೆಯಿಂದ ಮಂಜೂರು ಮಾಡಿರುತ್ತದೆ ಎಂದರೆ ಸಾಕ್ಷಿಯು ನನ್ನ ಅಜ್ಜ ಪುಟ್ಟಪ್ಪನ ಹೆಸರಿನಲ್ಲಿತ್ತು ಎಂದು ನುಡಿಯುತ್ತಾರೆ. ಕಂಚಿನೆಗಳೂರು ಗ್ರಾಮದ ಡ ಸಂಃ4063 ರ ಕಂದಾಯ ನಮೂದಿನ ಪ್ರಕಾರ ಸ ನಂಃ 150/1 ರ ಜಮೀನು 1 ಮತ್ತು 2 ನೇ ಪ್ರತಿವಾದಿಗಳ ತಂದೆಯಾದ ಮೃತ ಪಕ್ಕೀರಪ್ಪರವರ ಹೆಸರಿಗೆ ಮಂಜೂರು ಆದ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನು ಮೃತ ಪಕ್ಕೀರಪ್ಪ ರವರಿಗೆ ಭೂ ನ್ಯಾಯ ಮಂಡಳಿಯು ಮಂಜೂರು ಮಾಡಿರುವುದರಿಂದ ಅದು ಆತನ ವೈಯಕ್ತಿಕ ಆಸ್ತಿ ಎಂದರೆ ಸಾಕ್ಷಿಯು ಅದು ಪುಟ್ಟಪ್ಪನ ಜಮೀನಾಗಿದ್ದು, ಅವರು ಅದನ್ನು ಲಾವಣಿ ಆಧಾರದ ಮೇಲೆ 1 ಮತ್ತು 2 ನೇ



ಪ್ರತಿವಾದಿಗಳ ತಂದೆಯಾದ ಮೃತ ಪಕ್ಕೀರಪ್ಪರವರಿಗೆ ನೀಡಿದ್ದೆವು ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ರೈತ ನಾತೆಯಿಂದ ವಹಿವಾಟು ಮಾಡುತ್ತಿದ್ದ ಕಾರಣಕ್ಕೆ ಭೂ ನ್ಯಾಯ ಮಂಡಳಿಯು ಪಕ್ಕೀರಪ್ಪ ರವರಿಗೆ ಮಂಜೂರು ಮಾಡಿರುವುದರಿಂದ ಅದರ ಮೇಲೆ ವಾದಿಯರಿಗೆ ಯಾವುದೇ ಹಕ್ಕು

ಇರುವುದಿಲ್ಲ ಎಂದರೆ ಸರಿಯಲ್ಲ. ಅದು ಆತನ ಪ್ರತ್ಯೇಕ ಜಮೀನು ಇರುವುದರಿಂದ, ಪಕ್ಕೀರಪ್ಪ ಅವರು ಮರಣ ಹೊಂದಿದ ಕಾರಣಕ್ಕೆ ಆ ಆಸ್ತಿಯ ಮೇಲೆ 1 ಮತ್ತು 2 ನೇ ಪ್ರತಿವಾದಿಗಳಿಗೆ ಹಕ್ಕು ಇದೆ ಎಂದರೆ ಸರಿಯಲ್ಲ. ಸದರಿ ಮಂಜೂರಾತಿಯ ಬಗ್ಗೆ ಸಂಪೂರ್ಣ ಮಾಹಿತಿ ಇದ್ದರೂ ಪಕ್ಕೀರಪ್ಪನ ಪ್ರತ್ಯೇಕ ಅಥವಾ ಸ್ವಯಾರ್ಜಿತ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಂಗತಿಗಳ ಆಧಾರದ ಮೇಲೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಪುಟ್ಟಪ್ಪನ ಮರಣದ ನಂತರ ಆತನ ತಮ್ಮ ಪಕ್ಕೀರಪ್ಪ ಒಟ್ಟು ಕುಟುಂಬದ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದನು ಎಂದರೆ ಸರಿ. ದಾವಾ ಶೆಡ್ಯೂಲ್ ಎಫ್ ಮತ್ತು ಜಿ ಆಸ್ತಿಗಳಲ್ಲಿ ಪಕ್ಕೀರಪ್ಪರಿಗೂ ಅರ್ಧ ಹಿಸ್ಸೇ ಇದೆ ಎಂದರೆ ಸರಿ. ಪುಟ್ಟಪ್ಪ ರವರು ಮರಣ ಹೊಂದಿದ ಕಾಲಕ್ಕೆ ವಾದಿಗಳು ಅಪ್ರಾಪ್ತ ವಯಸ್ಕರು ಇದ್ದ ಕಾರಣಕ್ಕೆ ಅವರ ಸಂಪೂರ್ಣ ಆಗು ಹೋಗುಗಳನ್ನು 1 ಮತ್ತು 2 ನೇ ಪ್ರತಿವಾದಿಯರ ತಂದೆ ಪಕ್ಕೀರಪ್ಪ ನೋಡಿಕೊಂಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದುನನ್ನ ಅಜ್ಜ ಪುಟ್ಟಪ್ಪ ಮರಣ ಹೊಂದಿದ ತಕ್ಷಣವೇ ನನ್ನ ಅಜ್ಜಿ ಸಾವಕ್ಕ ವಾದಿಯರನ್ನು ಕರೆದುಕೊಂಡು ಪ್ರತ್ಯೇಕವಾಗಿದ್ದರು ಮತ್ತು ಆಕೆಯೇ ಅವರ ಆಗು ಹೋಗುಗಳನ್ನು ನೋಡಿಕೊಂಡಿದ್ದರು ಎಂದು ನುಡಿಯುತ್ತಾರೆ.

4. ಪುಟ್ಟಪ್ಪ ಮರಣ ಹೊಂದಿದ ನಂತರ ಒಟ್ಟು ಕುಟುಂಬದ ವ್ಯವಹಾರಗಳನ್ನು ನಡೆಸಲು ಕಷ್ಟವಾದ ಕಾರಣಕ್ಕೆ ಮತ್ತು ಪ್ರಮುಖವಾಗಿ 1 ಮತ್ತು 2 ನೇ ವಾದಿಯರ ಪಾಲನೆ ಮತ್ತು ಅವರ ಮದುವೆಗಾಗಿ ಪಕ್ಕೀರಪ್ಪಅವರಿಗೆ ಹಣದ ಸಮಸ್ಯೆ ಇದ್ದ ಕಾರಣಕ್ಕೆ ದಾವಾ



ಶೆಡ್ಯೂಲ್ ಎಫ್ ಮತ್ತು ಜಿ ಆಸ್ತಿಗಳನ್ನು ಒಟ್ಟು ಕುಟುಂಬದ ಅವಶ್ಯಕತೆಗೆ ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪುಟ್ಟಪ್ಪ ಮರಣ ಹೊಂದಿದ ನಂತರ ವಾದಿಯರನ್ನು ನೋಡಿಕೊಳ್ಳಲು ನನ್ನ ಅಜ್ಜಿ ಸಾವಕ್ಕರವರಿಗೆ ಕಷ್ಟವಾದ ಕಾರಣಕ್ಕೆ ಎಫ್ ಮತ್ತು ಜಿ ಆಸ್ತಿಗಳನ್ನು ಪಕ್ಕೀರಪ್ಪ ರವರಿಗೆ ಒತ್ತೆ ಹಾಕಿದ್ದಳು ಎಂದು ನನಗೆ ನನ್ನ ಅಜ್ಜಿ ತಿಳಿಸಿದ್ದಳು ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಎಫ್ ಮತ್ತು ಜಿ ಆಸ್ತಿಗಳನ್ನು ಪಕ್ಕೀರಪ್ಪರವರು ದಿಃ 9-03-1970 ರಂದು ಸಂಪೂರ್ಣವಾಗಿ ಶಿವಪ್ಪ ತಂದೆ ಮಲ್ಲಪ್ಪ ಇಂಗಳಕಿ ರವರಿಗೆ ಕುಟುಂಬದ ಅವಶ್ಯಕತೆಗಳಿಗೆ ಮಾರಾಟ ಮಾಡಿದ್ದರು ಎಂದರೆ ಗೊತ್ತಿಲ್ಲ._

5. ಪಕ್ಕೀರಪ್ಪರವರು ನನ್ನ ಅಜ್ಜಿಗೆ ಮೋಸ ಮಾಡುವ ಇರಾದೆ ಹೊಂದಿದ್ದರೆ ಎಫ್ ಮತ್ತು ಜಿ ಆಸ್ತಿಗಳಲ್ಲಿ ತನ್ನ ಅರ್ಧ ಹಿಸ್ಸೇಯನ್ನು ಇಟ್ಟುಕೊಂಡು ಕೇವಲ ಪುಟ್ಟಪ್ಪನ ಹಿಸ್ಸೇಯ ಅರ್ದ ಹಿಸ್ಸೇಯನ್ನು ಮಾರಾಟ ಮಾಡುತ್ತಿದ್ದನು ಎಂದರೆ ಸಾಕ್ಷಿಯು ಹಲವು ನಿಮಿಷಗಳವರೆಗೆ ಸುಮ್ಮನೆ ನಿಂತಿದ್ದು, ಯಾವುದೇ ಉತ್ತರ ನೀಡಿರುವುದಿಲ್ಲ. ದಾವಾ ಶೆಡೂಲ್ ಎಫ್ ಮತ್ತು ಜಿ ಆಸ್ತಿಗಳನ್ನು ಪಕ್ಕೀರಪ್ಪ ಒಟ್ಟು ಕುಟುಂಬದ ಅವಶ್ಯಕತೆಗೆ ಮಾರಾಟ ಮಾಡಿರುವುದರಿಂದ, ಸದರಿ ಮಾರಾಟವು ವಾದಿಯರಿಗೆ ಮತ್ತು 1 ಮತ್ತು 2 ನೇ ಪ್ರತಿವಾದಿಯರಿಗೆ ಬಾಂದಾಯಿಸುತ್ತದೆ ಎಂದರೆ ಸಾಕ್ಷಿಯು ಪಕ್ಕೀರಪ್ಪ ಅವರು ನಮ್ಮ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

6. ನಿ.ಪಿ-8 ರ ಡ ಸಂಃ125 ರ ಪ್ರಕಾರ ಮೂಲ ಪುರುಷ ಭರಮಪ್ಪ ಇಂಗಳಕಿ ರವರಿಗೆ ದಾವಾ ಶೆಡ್ಯೂಲ್ ಸಿ ಮತ್ತು ಡಿ ಆಸ್ತಿಗಳಲ್ಲಿ ನಾಲ್ಕಾಣೆಯ ಭಾಗದ ಹಿಸ್ಸೇಯ ಹಕ್ಕು ಇತ್ತು ಎಂದರೆ ಸಾಕ್ಷಿಯು ನನ್ನ ಮುತ್ತಜ್ಜನಿಗೆ 8 ಆಣೆಯ ಭಾಗ ಬರಬೇಕಿತ್ತು ಎಂದು ನುಡಿಯುತ್ತಾರೆ. ಅದರ ಪ್ರಕಾರ ವಾದಿ ಮತ್ತು ಪ್ರತಿವಾದಿಗಳ ಕುಟುಂಬಕ್ಕೆ ದಾವಾ ಶೆಡ್ಯೂಲ್



ಸಿ ಮತ್ತು ಡಿ ಆಸ್ತಿಗಳಲ್ಲಿ ಕೇವಲ 13 ಗುಂಟೆ 8 ಆಣೆ ಮಾತ್ರ ಬರುತ್ತದೆ ಎಂದರೆ ಸರಿಯಲ್ಲ. ಸದರಿ ಜಮೀನು ತುಂಡು ಜಮೀನು ಇದ್ದ ಕಾರಣಕ್ಕೆ ಅದು ಉಪಯೋಗ ಆಗುವುದಿಲ್ಲ ಎಂದು ಅದನ್ನು ಸಹ 1 ಮತ್ತು 2 ನೇ ಪ್ರತಿವಾದಿಗಳು ಒಟ್ಟು ಕುಟುಂಬದ ಅವಶ್ಯಕತೆಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅದು ಸಮತಟ್ಟಾದ ಮತ್ತು ಉತ್ತಮ ಜಮೀನಾಗಿದ್ದು, ಅವರು ಮಾರಾಟ ಮಾಡಿದ ಸಂಗತಿಗಳನ್ನು ನನಗೆ ತಿಳಿಸಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಎ ಜಮೀನು ಪ್ರಸ್ತುತ ತಿರಕಪ್ಪ ಇಂಗಳಕಿ ಮತ್ತು ಇತರೆಯವರ ಜಂಟಿ ಹೆಸರಿನಲ್ಲಿದೆ ಎಂದರೆ ಸರಿ. ದಾವಾ ಶೆಡ್ಯೂಲ್ ಎ ಜಮೀನು ತಿರಕಪ್ಪ ಇಂಗಳಕಿ ರವರ ಹೆಸರಿನಲ್ಲಿದ್ದರೂ ಅವರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು

ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

ಹಾನಗಲ್ಲ.

ಸಾಕ್ಷಿದಾರರ ಸಹಿ